ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 561/2023

(ಪ್ರಾಸಾ-6 ಚಾಸಾ-8 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 17.11.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಎಂ.ಕೆ. ರಾಮಯ್ಯ |
| ತಂದೆಯ ಹೆಸರು | - | ಕೃಷ್ಣಪ್ಪ |
| ವಯಸ್ಸು | - | 48 ವರ್ಷ, |
| ಉದ್ಯೋಗ | - | ಬಾರ್ ಕ್ಯಾಷಿಯರ್ |
| ವಾಸ | - | ಪೀಣ್ಯ 2 ನೇ ಹಂತ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಹೆಗ್ಗನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಮಂದಾರ ಬಾರ್ ನಲ್ಲಿ ಕಳೆದ 20 ವರ್ಷಗಳಿಂದ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಬೆಳಗ್ಗೆ 09.30 ರಿಂದ ರಾತ್ರಿ 11.30 ರವರೆಗೆ ಬಾರ್ ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತೇನೆ. ನಮ್ಮ ಬಾರ್ ನ ಅಕ್ಕಪಕ್ಕದಲ್ಲಿ ಜಗಳ ಆಗಿರುವುದನ್ನು ನಾನು ನೋಡಿರುವುದಿಲ್ಲ ಹಾಗೂ ನನಗೆ ಗೊತ್ತಿಲ್ಲ. ಈಗ ಸುಮಾರು ಎರಡು ವರ್ಷಗಳ ಹಿಂದೆ ಪೋಲಿಸರು ನಮ್ಮ ಬಾರ್ ನ ಬಳಿ ಬಂದು ಭರತ್ ಮತ್ತು ಇತರೆ ಇಬ್ಬರ ಹೆಸರು ಹೇಳಿ ಅವರು ನಿಮ್ಮ ಬಾರ್ ನಲ್ಲಿ ಬಂದು ಮದ್ಯಪಾನ ಮಾಡಿರುತ್ತಾರೆ ಎಂದು ವಿಚಾರಣೆ ಮಾಡಿದ್ದು ನಾನು ಅವರು ಬಂದು ಕುಡಿದು ಹೋಗಿರುತ್ತಾರೆ ಎಂದು ಹೇಳಿರುತ್ತೇನೆ. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಆರೋಪಿಯನ್ನು ನೋಡಿ ಸಾಕ್ಷಿ ಈ ವ್ಯಕ್ತಿಯನ್ನು ನಾನು ಈ ಹಿಂದೆ ನಮ್ಮ ಬಾರ್ ನಲ್ಲಿ ನೋಡಿರುವುದಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2. ದಿಃ13.01.2023 ರಂದು ರಾತ್ರಿ 08.00 ಘಂಟೆಯಲ್ಲಿ ಇಬ್ಬರು ವ್ಯಕ್ತಿಗಳು ನಮ್ಮ ಬಾರ್ ನಲ್ಲಿ ಮದ್ಯಪಾನ ಮಾಡುತ್ತಾ ಬೈದಾಡಿಕೊಳ್ಳುತ್ತಿದ್ದು ಅವರ ಜೊತೆ ಇದ್ದಂತಹ ಇನ್ನೊಬ್ಬ ವ್ಯಕ್ತಿ ಸಹ ಬೈದಾಡಿಕೊಂಡು ಆಚೆ ಬಂದು ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಂಡು ಕೈಗಳಿಂದ ಹೊಡೆದಾಡಿಕೊಳ್ಳುತ್ತಿದ್ದು ನಾನು ಅವರನ್ನು ವಿಚಾರ ಮಾಡಲಾಗಿ ಗಲಾಟೆ ಮಾಡುತ್ತಿದ್ದವರ ಹೆಸರು ಕೇಶವ ಮತ್ತು ಭರತ್ ಎಂದು ಹೇಳಿದ್ದು ಕಲ್ಲೇಶ್ ಮತ್ತು ಶ್ರೀಧರ್ ಎಂಬುವವರು ಗಲಾಟೆ ಬಿಡಿಸಿದ್ದರು ಎಂದರೆ ನಾನು ನೋಡಿರುವುದಿಲ್ಲ ಹಾಗೂ ನನಗೆ ಗೊತ್ತಿಲ್ಲ. ಪೋಲಿಸರು ನನಗೆ ನೊಟೀಸ್ ನೀಡಿ ವಿಚಾರಣೆ ಮಾಡಿದಾಗ ಈಗ ಓದಿ ಹೇಳಿದಂತೆ "ದಿಃ13.01.2023 ರಂದು ರಾತ್ರಿ --------------- ಮತ್ತೆ ನೋಡಿದರೆ ಗುರುತಿಸುತ್ತೇನೆ" ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-13 ಎಂದು ಗುರುತಿಸಲಾಯಿತು. ಮೃತ ಕೇಶವಮೂರ್ತಿ ಮತ್ತು ಆರೋಪಿಯನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರೂ ಹಾಗೂ ನಾನು ನಿಪಿ-13 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> <u>ಆರೋಪಿ ಪರ ಶ್ರೀಮತಿ ಕೆಎಂಸಿ ವಕೀಲರಿಂದಃ</u>**

ನಮ್ಮ ಬಾರ್ ನಲ್ಲಿ ಸಾಕಷ್ಟು ಜನ ಗ್ರಾಹಕರು ಬಂದು ಕುಡಿದು ಹೋಗುವುದರಿಂದ ಅವರ ಮುಖ ಚರ್ಯೆ ಹಾಗೂ ಗುರುತು ಹಾಗೂ ಹೆಸರನ್ನು ಹೇಳಲು ಬರುವುದಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಭರತ್ ಕುಮಾರ್ ಹಾಗೂ ಇನ್ನಿಬ್ಬರು ಬಾರ್ ಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು